(ಶ್ರೀ ಬಿ. ಬಸವಲಿಂಗಪ್ಪ)

ಯಲ್ಲಿ ಇತ್ತು. ಹಿಂದೆ ಅದಕ್ಕೆ ಹಣವನ್ನು ಕೂಡ ಒದಗಿಸಿದೆ. ಆದರೆ ಆ ಹಣವನ್ನು ಉಪಯೋಗ ಮಾಡಿಲ್ಲ. ಆದ್ದರಿಂದ ಆತಿ ಶೀಘ್ರವಾಗಿ ಎರೆ ತೋಟದವರಿಗೆ ಮನೆಗಳನ್ನು ಕಟ್ಟುವುದಕ್ಕೆ ಸ್ಕೈಟುಗಳನ್ನು ಒದಗಿಸತಕ್ಕಂಥಾ ವಿಚಾರ ಸರ್ಕಾರದ ತೀವ್ರ ಗಮನದಲ್ಲಿರುವುದರಿಂದ 2—3 ತಿಂಗಳಿನಲ್ಲಿ ಅದನ್ನು ತೀರ್ಮಾನ ಮಾಡುತ್ತೇವೆ.

ಶ್ರೀ ಜಿ. ಪುಟ್ಟಸ್ವಾಮಿ.—ಇದುವರೆಗೆ ಮನವಿ ಇದ್ದರೂ ಸಹ ಕಾರ್ಯಕ್ರಮ ತೆಗೆದುಕೊಳ್ಳದೆ ಇರುವವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

9-30 A. M.

ಶ್ರೀ ಡಿ. ದೇವರಾಜ ಅರಸ್.—ಈ ಸಂದರ್ಭದಲ್ಲಿ ಮಾನ್ಯ ಸದಸ್ಯರ ಅಭಿಪ್ರಾಯಕ್ಕೆ ಮಾನ್ಯತೆ ಸರ್ಕಾರಕ್ಕೆ ಇದೆ ಎಂದು ಹೇಳುತ್ತೇನೆ. ಆದರೆ ಇಲ್ಲಿ ಪ್ರಶ್ನೆ ಬಂದಿರುವುದು ಏನೆಂದರೆ ಡಿಸ್‌ಪ್ಲೇಸ್‌ಡ್ ಜನರಿಗೆ ಸೂಯೇಜ್ ಫಾರಂನಲ್ಲಿ ಜಾಗ ಕೊಡಬೇಕೆಂದು ಪ್ರಶ್ನೆ ಬಂದಾಗ ನಾನು ಸೂಯೆಜ್ ಫಾರಂನಲ್ಲಿ ಕೊಡುವುದು ಬೇಡವೆಂದು ಹೇಳಿದೆ. ಏಕೆಂದರೆ ಆ ಸೂಯೇಜ್ ಫಾರಂನಿಂದ ಆ ಊರಿನಲ್ಲಿರತಕ್ಕ ಜನರಿಗೆ ಬಹಳ ಅನುಕೂಲವಿದೆ. ಆದ್ದರಿಂದ ಅದನ್ನು ಬಟ್ಟು ರಾಯಲ್ ಫಾರಂನ 700 ಎಕರೆ ಚಿಲ್ಲರೆ ಅನಿಮಲ್ ಹಸ್ಬೆಂಡರಿಯವರು ಬ್ರೀಡಿಂಗ್ ಸ್ಟೇಶನ್ ಮಾಡಬೇಕೆಂದು ತೆಗೆದು ಕೊಂಡಿರುವುದರಿಂದ ಅದರಲ್ಲಿ ಒಂದು ಭಾಗವನ್ನು ಈ ಜನರಿಗೆ ಕೊಡೋಣ ಎಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಆದರಿಂದ ಅಲ್ಲಿ ಅವರನ್ನು ರೀಹ್ಯಾಬಿಲಿಟೇಟ್ ಮಾಡೋಣ.

CONSTRUCTION OF GOVERNMENT GIRLS HIGH SCHOOL BUILDING AT ARSIKERE

302 Sri R. PEERANNA (Heggadadevanakote).—

Will the Minister for Education be pleased to state :—

(*a*) whether any proposal to constuct Government Girls High School Building at Arsikere, is pending with the Government ;

(*b*) if so, the estimated cost of the building and since when the proposal is pending ?

Sri V. S. KOWJALGI (**Minister of State for Youth Services**) [On behelf of **Sri A. R. Badarinarayana** (Minister for Education)]

(*a*) Yes.

(*b*) The plan and estimate have been called for. The proposal to construct this building on vacant Government land is pending since 31-10-1972.

ಶ್ರೀ ಎಚ್. ಎಸ್. ಸಿದ್ದಪ್ಪ.—ಅರಸೀಕೆರೆಯ ಸರ್ಕಾರೀ ಬಾಲಕಿಯರ ಪ್ರೌಢಶಾಲಾ ಕಟ್ಟಡಕ್ಕೆ ಮಂಜೂರಾತಿಯಾಗಿ ಎಷ್ಟು ವರ್ಷವಾಯಿತು ; ಇದುವರೆಗೂ ಕಟ್ಟಡವನ್ನು ಕಟ್ಟಿಸುವ ಪ್ರಯತ್ನ ಏಕೆ ಮಾಡಿಲ್ಲ ; ಮತ್ತು ಅದಕ್ಕೆ ಎಷ್ಟು ದಿವಸಗಳಲ್ಲಿ ಎಸ್ಟಿಮೇಟ್ ಮಾಡಿ ಇದನ್ನು ಮಾಡುತ್ತೀರಿ ?

† ಶ್ರೀ ವಿ. ಎಸ್. ಕೌಜಲಗಿ.—ಅದನ್ನು 1973—74ನೇ ಸಾಲಿನಲ್ಲಿ ಮಾಡುತ್ತೇವೆ.